# ಸ್ವಾಜಿಗಳ ಸ್ವಾಮಿ!



■ ಪ್ರವೀಣ ಕುಲಕರ್ಣಿ

ಆಫ್ರಿಕಾದಲ್ಲೊಂದು ಎಸ್ವಾತಿನಿ ಎಂಬ ದೇಶವಿದೆ ಗೊತ್ತೆ? 2018ರವರೆಗೆ ಈ ದೇಶಕ್ಕೆ ಸ್ವಾಜಿಲ್ಯಾಂಡ್ ಎಂಬ ಹೆಸರಿತ್ತು. ಎಸ್ವಾತಿನಿಯ ವಿಶೇಷವೆಂದರೆ ಸಂಪೂರ್ಣವಾಗಿ ರಾಜರ ಆಡಳಿತಕ್ಕೆ ಒಳಪಟ್ಟ ಜಗತ್ತಿನ ಕೆಲವೇ ಕೆಲವು ರಾಷ್ಟ್ರಗಳಲ್ಲಿ ಇದೂ ಒಂದು. ಜಗತ್ತಿನಲ್ಲೇ ಅತ್ಯಧಿಕವಾಗಿ ಎಚ್‌ಐವಿ ಸೋಂಕಿನಿಂದ ಬಾಧೆಗೊಳಗಾದ ದೇಶ ಇದು. ಸಾವಿರ ಸಾವಿರ ಸಂಖ್ಯೆಯಲ್ಲಿ ಸ್ವಾಜಿಗಳು ಈ ಸೋಂಕಿಗೆ ಬಲಿಯಾಗಿದ್ದಾರೆ. ಹೀಗಾಗಿ ಭಾರೀ ಸಂಖ್ಯೆಯಲ್ಲಿ ಮಕ್ಕಳು ಅನಾಥರಾಗಿದ್ದಾರೆ. ಇಂತಹ ಸಾಮಾಜಿಕ ವಿಪ್ಲವದ ದೇಶದ ದೊರೆಯೇ ಮಸ್ವಾತಿ–3. ಸಾಮಾಜಿಕ ಸಮಸ್ಯೆಗಳು ಏನೇ ಇರಲಿ, ಈ ದೊರೆಯ ಉಮ್ಲಾಂಗಾ ನಾದನೃತ್ಯದ ವೈಭವಕ್ಕೆ ಮಾತ್ರ ಏನೂ ಕೊರತೆ ಇಲ್ಲ. ದೇಶದ ಕನ್ಯೆಯರೆಲ್ಲ ಎದೆಯಭಾಗ ತೆರೆದಿರುವಂತೆ ಸಾಂಪ್ರದಾಯಿಕ ಉಡುಗೆ ತೊಟ್ಟು ಹಾಡುತ್ತಾ, ನೃತ್ಯ ಮಾಡುತ್ತಾ ಈ ರಾಜನ ಅರಮನೆ ಆವರಣದಲ್ಲಿ ಸಂಭ್ರಮಿಸುವುದು ಈ ಉತ್ಸವದ ಹೆಗ್ಗುರುತು. ನೂರಾರು ದನಗಳನ್ನು ಬಲಿಕೊಡುವ ರಾಜ, ಗುಂಪು ಗುಂಪಾಗಿ ಬಂದ ಕನ್ಯೆಯರತ್ತ ಮಾಂಸ ಎಸೆಯುವುದು ರೂಢಿ. ಅದನ್ನು ಪ್ರಸಾದವೆಂದು ಆ ಕನ್ಯೆಯರು ತಮ್ಮ ಊರಿಗೆ ಹೊತ್ತೊಯ್ದರೆ ಉತ್ಸವ ಪರಿಸಮಾಪ್ತಿಗೊಂಡಂತೆ.

ಸ್ವಾಜಿ ಬುಡಕಟ್ಟಿನ ಎಲ್ಲ ಸಂಪ್ರದಾಯವನ್ನು ಪಾಲಿಸುವ ಈ ರಾಜ, ಸೂಟು–ಬೂಟು ಧರಿಸಿ ದೇಶ–ವಿದೇಶಗಳ ಮುಖಂಡರೊಂದಿಗೆ ಒಡನಾಡುವುದೂ ಉಂಟು. ಆಫ್ರಿಕಾದಲ್ಲಿ ಪ್ರಭಾವಿ ನಾಯಕನಾಗಿ ಬೆಳೆದಿರುವ ಮಸ್ವಾತಿ–3 ಭಾರತದೊಂದಿಗೂ ಒಡನಾಟ ಹೊಂದಿದ್ದಾರೆ. ರಾಮನಾಥ್ ಕೋವಿಂದ ಅವರು ರಾಷ್ಟ್ರಪತಿಯಾಗಿದ್ದಾಗ ಎಸ್ವಾತಿನಿ ದೇಶಕ್ಕೆ ತೆರಳಿದ್ದರು. ಆಗ ಅವರಿಗೆ ಆ ದೇಶದ ಅತ್ಯುನ್ನತ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ಮಸ್ವಾತಿ–3 ಅವರು ಎಸ್ವಾತಿನಿಯ ಹಿಂದಿನ ರಾಜ ಸೊಭುಜಾ–2 ಅವರ ಮಗ. ಸೊಭುಜಾ–2 ಅವರು 82ನೇ ವಯಸ್ಸಿನಲ್ಲಿ ನಿಧನವಾಗುವ ಹೊತ್ತಿಗೆ ಅವರಿಗೆ 70 ಪತ್ನಿಯರು ಇದ್ದರು. ಮಸ್ವಾತಿ–3 ಅವರಿಗೂ ಹದಿನೈದು ಪತ್ನಿಯರಿದ್ದಾರೆ (ಅವರಿಂದ 45 ಮಕ್ಕಳನ್ನು ಪಡೆದಿದ್ದಾರೆ). ಎಸ್ವಾತಿನಿ ರಾಜ ಬೇಕಾದಷ್ಟು ಸಖಿಯರೊಂದಿಗೆ ಸರಸ ಆಡಬಹುದು. ಯಾರು ಗರ್ಭಿಣಿಯರಾಗುತ್ತಾರೋ ಅವರನ್ನು ಮಾತ್ರ ರಾಜ ಮದುವೆಯಾಗುವುದು ರೂಢಿ. ಉಳಿದವರಿಗೆ ಅಂತಃಪುರದಲ್ಲಿ ಸೇವಕಿಯ ಪಾತ್ರವಷ್ಟೆ.

ತಂದೆಯ ನಿಧನದಿಂದಾಗಿ ಸಿಂಹಾಸನ ಏರುವ ಹೊತ್ತಿಗೆ ಮಸ್ವಾತಿ–3 ಅವರಿಗೆ ಕೇವಲ ಹದಿನೆಂಟರ ಹರೆಯ. ಆ ದೇಶದ ಸಂವಿಧಾನದ ಪ್ರಕಾರ, ಸರ್ಕಾರದ ಎಲ್ಲ ವಿಭಾಗಗಳಿಗೂ ರಾಜನೇ ಮುಖ್ಯಸ್ಥ ಮತ್ತು ಆತನ ಮಾತೇ ಅಂತಿಮ. ಯಾವುದೇ ವಿಚಾರಣೆಯಿಂದ ಆತನಿಗೆ ವಿನಾಯಿತಿಯೂ ಉಂಟು. ಮಸ್ವಾತಿ–3 ಅತ್ಯಂತ ಕಠಿಣ ಕಾನೂನುಗಳನ್ನು ಜಾರಿಗೆ ತಂದ ಕುಖ್ಯಾತಿಯನ್ನೂ ಹೊಂದಿದ್ದಾರೆ. ಅವರ ಅಧಿಕಾರದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಎಗ್ಗಿಲ್ಲದೆ ಆಗುತ್ತಿದೆ ಎಂಬ ಆರೋಪಗಳು ಸಾಮಾನ್ಯವಾಗಿವೆ. ರಾಷ್ಟ್ರದ್ರೋಹದ ಕಾನೂನನ್ನು ಹುರಿಗೊಳಿಸಲಾಗಿದ್ದು, ರಾಜನ ವಿರುದ್ಧ ಧ್ವನಿ ಎತ್ತಿದವರ ಉಸಿರು ಅಡಗಿಸಲಾಗುತ್ತದೆ ಎಂಬ ದೂರುಗಳು ಇವೆ.

ರಾಜಕೀಯ ಚಳವಳಿಗಳು ಹರಳುಗಟ್ಟದಂತೆ ಮುಖಂಡರನ್ನು ಸೆರೆಗೆ ತಳ್ಳುವುದು, ಅವರ ಮನೆಗಳನ್ನು ನಾಶ ಮಾಡುವುದು, ಹಾಗೂ ಬಗ್ಗದವರಿಗೆ ಮರಣ ದಂಡನೆ ಶಿಕ್ಷೆ ವಿಧಿಸುವುದು ಇಲ್ಲಿ ಸಾಮಾನ್ಯ. ಮಾಧ್ಯಮ ಸಂಪೂರ್ಣವಾಗಿ ರಾಜಮನೆತನದ ಹಿಡಿತದಲ್ಲಿದೆ. ದೇಶದ ಬಹುಪಾಲು ಸ್ವಾಜಿಗಳು ಬಡತನದ ಬೇಗೆಯಲ್ಲಿ ಬೆಂದರೆ, ರಾಜ ಮಾತ್ರ ಅರಮನೆಯ ಸುಖದ ಸುಪ್ಪತ್ತಿಗೆಯಲ್ಲಿ ಮೀಯುವರು. ದೇಶದ ಶೇ 80ರಷ್ಟು ಜನ ಬಡತನ ರೇಖೆಗಿಂತ ಕೆಳಗಿದ್ದಾರೆ. ರಾಣಿ ಎಲಿಜಬೆತ್ ಅವರ ಸಿಂಹಾಸನಾರೋಹಣದ ವಜ್ರ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಮಸ್ವಾತಿ–3 ಅವರಿಗೂ ಆಹ್ವಾನ ಬಂದಿತ್ತು. ಈ ರಾಜ ಉತ್ಸವದಲ್ಲಿ ಪಾಲ್ಗೊಂಡಿದ್ದರು ಕೂಡ. ಆಗ ಮಾನವ ಹಕ್ಕುಗಳ ದಮನ ಮಾಡುವ ಇಂತಹ ನಾಯಕನನ್ನು ಉತ್ಸವಕ್ಕೆ ಆಹ್ವಾನಿಸಿದ್ದೇಕೆ ಎಂಬ ಹುಯಿಲು ದೊಡ್ಡದಾಗಿ ಎದ್ದಿತ್ತು. ತಾವು ಬಯಸಿದ ಮಹಿಳೆಯರನ್ನು ಅಪಹರಿಸಿಯಾದರೂ ಪಡೆಯುತ್ತಾರೆ ಎಂಬ ದೂರೂ ಇವರ ಮೇಲಿದೆ.

ಎಸ್ವಾತಿನಿ ಸರ್ಕಾರ, ರಾಜನ ಐಷಾರಾಮಿ ಜೀವನಕ್ಕಾಗಿಯೇ ವಾರ್ಷಿಕ ಸಾವಿರಾರು ಕೋಟಿ ರೂಪಾಯಿಯನ್ನು ಬಜೆಟ್‌ನಲ್ಲಿ ಎತ್ತಿಡುತ್ತದೆ. ಜಗತ್ತಿನ ಸಿರಿವಂತ ರಾಜರುಗಳಲ್ಲಿ ಮಸ್ವಾತಿ–3 ಕೂಡ ಒಬ್ಬರಾಗಿದ್ದಾರೆ. ಅತ್ಯಂತ ದುಬಾರಿಯಾದ ವಾಹನಗಳು ಅವರ ಸಂಗ್ರಹದಲ್ಲಿವೆ. ಕೋಟ್ಯಂತರ ರೂಪಾಯಿ ಬಾಳುವ ವಾಚ್‌ಗಳ ಸಂಗ್ರಹವೂ ಅವರ ಬಳಿಯಿದೆ. ತಮ್ಮ ಎಲ್ಲ ಪತ್ನಿಯರಿಗೆ ಅರಮನೆ ಕಟ್ಟಲು, ಅವುಗಳನ್ನು ಅಲಂಕರಿಸಲು ಸರ್ಕಾರದ ನೂರಾರು ಕೋಟಿ ರೂಪಾಯಿ ಹಣವನ್ನು ಅವರು ವ್ಯಯಿಸಿದ್ದಾರೆ. ಒಮ್ಮೆ, ರಾಜನ ಹದಿಮೂರು ಪತ್ನಿಯರನ್ನು ವಿಶೇಷ ವಿಮಾನವೊಂದು ಶಾಪಿಂಗ್‌ಗಾಗಿ ವಿದೇಶಕ್ಕೆ ಕರೆದೊಯ್ದಿತ್ತು. ಹಣದ ಈ ಪರಿಯ ಪೋಲನ್ನು ಕಂಡು, ದೇಶದ ನಾರಿಶಕ್ತಿ ಸಿಡಿದೆದ್ದಿತ್ತು. ಏಕೆಂದರೆ, ದೊಡ್ಡ ಸಂಖ್ಯೆಯ ಮಹಿಳೆಯರು ಎಚ್‌ಐವಿ ಸೋಂಕಿನಿಂದ ಪೀಡಿತರಾಗಿ ಚಿಕಿತ್ಸೆಗೆ ಸೌಲಭ್ಯವಿಲ್ಲದೆ ಒದ್ದಾಡುತ್ತಿದ್ದರೂ ಅನುದಾನ ಬಿಡುಗಡೆಯಾಗಿರಲಿಲ್ಲ. ರಾಜನ ಮೇಲೆ ಭಕ್ತಿ ತೋರುವ ಪ್ರಜಾವರ್ಗ ಈ ದೇಶದಲ್ಲಿದೆ. ವಿರೋಧಿಸುವವರ ಧ್ವನಿ ಕ್ಷೀಣವಾಗುತ್ತಿದೆ. ಶಿಬಿರಗಳಲ್ಲಿ ಯಾತನೆ ಅನುಭವಿಸುವವರನ್ನು ಅವರ ಪಾಡಿಗೆ ಬಿಟ್ಟು ಸ್ವಾಜಿಗಳ ಈ ಸ್ವಾಮಿ ಈಗ ಮತ್ತೊಂದು ಉಮ್ಲಾಂಗಾ ನಾದನೃತ್ಯದ ವೈಭವದಲ್ಲಿ ಮೈಮರೆತಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65